ಹಳೆಯ ಮೈಸೂರಿಗೆ ವಾಪಸ್ಸು ಬರುತ್ತಾರೆ. ನಮ್ಮ ಏರಿಯಾ, ಬಿದರೆ, ಗುಲ್ಬರ್ಗ, ರಾಯಚೂರು, ಇಲ್ಲಿ ಅವರು ಇರುವುದಿಲ್ಲ.

ಶ್ರೀ ಜೆ. ಬಿ. ಶಂಕರ್‌ರಾವ್. — ಅಧ್ಯಕ್ಷರೆ, ಅವರು ರಾಯಚೂರು ಜಿಲ್ಲೆಗೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದ್ದಾರೆ. ಈಗ ಬೀದರ್, ಗುಲ್ಬರ್ಗ, ಅಂತ ಹೇಳುತ್ತಿದ್ದಾರೆ. ನಾನು ರಾಯಚೂರು ಜಿಲ್ಲೆಯ ವಿಚಾರವನ್ನು ಹೇಳಿದ್ದೇನೆ. ಅಲ್ಲಿ ಹೋದ ವರ್ಷ ನನ್ನಲ್ಲಿರತಕ್ಕ ಮಾಹಿತಿ ಪ್ರಕಾರ ೧೬ ಪ್ರಾಥಮಿಕ ಶಾಲೆಗೆ ೧೫ ಜನರ ಕೊರತೆ ಇತ್ತು, ಹಾಗೆ ಟೀಚರ್ಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ಒಬ್ಬರ ಕೊರತೆ ಇತ್ತು. ಫೆಬ್ರುವರಿ ತಿಂಗಳಿನಲ್ಲಿ ಹೆಚ್ಚುವರಿ ಶಿಕ್ಷಕರು ಏನಿದ್ದರು ಅವರನ್ನು ಅಲ್ಲಿಗೆ ವರ್ಗಾಯಿಸಿ ಸ್ಥಳೀಯವಾಗಿ ನೇಮಕಾತಿ ಮಾಡಿ ಎಲ್ಲಾ ಖಾಲಿ ಸ್ಥಾನಗಳನ್ನೂ ಭರ್ತಿ ಮಾಡಿದ್ದೇವೆ. ಆದ್ದರಿಂದ ಶಿಕ್ಷಕರ ಕೊರತೆ ಇಲ್ಲ ಅಂತ ಹೇಳುತ್ತೇನೆ.

ಪ್ರಶ್ನೆ ೨೦೨ (೨೨೯)

ಸದಸ್ಯರು ಗೈರುಹಾಜರು.

ಅಧ್ಯಕ್ಷರು. — (ಪ್ರಶ್ನೋತ್ತರಗಳು ಮುಂಗಿದವು).

QUESTIONS FOR ANSWERS ON THE DAY

(But not taken up)

Misappropriation of funds in Hirehadagali Service Co-operative Society.

509 SRI M. RAMAPPA (Kurugodu).—Will the Minister for Co-operation be pleased to state.—

(a) whether the Government is aware of any misappropriation of funds by the management (Directors, Staff including) of Hirehadagali Service Co-operative Society Limited, Hirehadagali in Bellary Taluk;

(b) if so, the steps the Government has taken to institute Legal action against them ?

SRI A. B. JAKANUR (Minister for Co-operation).—

(a) as per the audit report for the year 1975-76, Sri Managi Hanumanthappa, Ex-Hon. Secretary of Hirehadagali Service Co-operative Society Limited has misappropriated the funds of the Society.

(b) Action on both Civil and Criminal sides has been taken against the delinquent by the Liquidator.

Dharna by Khanapur Ryots

538 SRI N. B. SIRDESAI (Khanapur).—Will the Chief Minister be pleased to state.—

(a) whether it is a fact that on 5th March 1980 the Agriculturists of Lingamath, Kakkeri and near about villages in Khanapur Taluk staged a Dharna ;

(b) whether it is a fact that the demonstrators wanted to direct the attention of the Government for their longstanding demand of conversion of Hukkeri Irrigation Tank into Major Irrigation Scheme by construction of a Dam ;

(c) whether it is a fact that the Police made lathi charge against the peaceful demonstrators and some have sustained injuries of serious nature;

(d) if so, the action taken to rehabilitate them ?

SRI R. GUNDU RAO (Chief Minister).—

(a) Yes.

(b) Yes.

(c) No.

(d) Does not arise in view of the reply given to clause 'C'.

Matter Under Rule 312

Re.—Collection of tuition fees from students belonging to weaker section contrary to instructions given in Govt. Order.

ಶ್ರೀ ವಿ. ಜಿ. ಕೊಡಗಿ.—ಅಧ್ಯಕ್ಷರೆ, ನಾನು ರೂಲ್ 312ರ ಪ್ರಕಾರ ಒಂದು ನೋಟೀಸ್ ಕಳುಹಿಸಿ ಕೊಟ್ಟಿದ್ದೆ. ಸಮುಧದಮ್ಮ ಮಂತ್ರಿಗಳು ಇಲ್ಲೇ ಇದ್ದಾರೆ. ಇದು ಏನಾಗಿದೆ ಅಂದರೆ...

ಅಧ್ಯಕ್ಷರು.—ಬಹಳ ಸದಸ್ಯರು ದಯವಿಟ್ಟು ಕುಳಿತುಕೊಳ್ಳಿ...

ಶ್ರೀ ವಿ. ಜಿ. ಕೊಡಗಿ.—ಅಧ್ಯಕ್ಷರೆ, ವಿಷಯ ಹೇಳದೇ ಇದ್ದರೆ ಉತ್ತರ ಪ್ರಾಮುಖ್ಯತೆ ಅರ್ಥ ಆಗುವುದಿಲ್ಲ.

ಅಧ್ಯಕ್ಷರು. ಈಗ ಇನ್‌ಫರ್‌ಮೇಷನ್ ಇಲ್ಲ ಅಂತ ಹೇಳುತ್ತಿದ್ದಾರೆ ನಾಳೆ ಹಾಕುತ್ತಾರೆ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಿ. ಜಿ. ಕೊಡಗಿ.—ಅಧ್ಯಕ್ಷರೆ, ಇದು ಬಹಳ ಪ್ರಾಮುಖ್ಯವಾದ ವಿಚಾರ. ನಾನು ಈ ಸದನದ ಸಮಯವನ್ನು ಪೋಲುಮಾಡಲಿಕ್ಕೆ ಅಪೇಕ್ಷಿಸುತ್ತಿಲ್ಲ...

ಅನೇಕರಿಗೆ ತೊಂದರೆಯಾಗಿದೆ. ಸರ್ಕಾರೀ ಆಜ್ಞೆ ಪ್ರಕಾರ ಅನೇಕ ವಿದ್ಯಾರ್ಥಿಗಳಿಗೆ ತೊಂದರೆ ಯಾಗಿದೆ.

ಅಧ್ಯಕ್ಷರು.—ನೀವು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನನ್ನ ಆಕ್ಷೇಪಣೆ ಏನೂ ಇಲ್ಲ ಆದರೆ ಮಾನ್ಯ ಮಂತ್ರಿಗಳು ಅದಕ್ಕೆ ನನ್ನ ಪರ್ಮಿಶನ್ ಇಲ್ಲ ಎಂಬುದಾಗಿ ಹೇಳುತ್ತಿದ್ದಾರೆ.

ಶ್ರೀ ವಿ. ಜಿ. ಕೊಡಗಿ.—ನಾನು ಈ ಬಗ್ಗೆ ಸಮುಧದಮ್ಮ ಮಂತ್ರಿಗಳ ಪರ್ಮಿಶನ್ ತಗೊಂಡಿದ್ದೇನೆ. ನಾಳೆ ಅವರು ಉತ್ತರ ಕೊಡುತ್ತೇನೆಂದು ನನ್ನ ಜೊತೆಯಲ್ಲಿ ಹೇಳಿದ್ದಾರೆ. ಆದರೆ ವಿಷಯಗಳ ಪ್ರಾಮುಖ್ಯತೆಯನ್ನು ಪರಿಶೀಲಿಸಿ ಮುಖ್ಯಂತರ ಸರ್ಕಾರದ ಗಮನಕ್ಕೆ ತರಬೇಕಾದುದು ನನ್ನ ಕರ್ತವ್ಯ ಇದೆ. ಅಂತಹ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡದಿದ್ದರೆ ವಿಷಯಗಳ ಗಂಭೀರತೆ ಅನೋಗತಿಯಾಗುತ್ತದೆ.